# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| | | |
|---|---|---|
| ಸಂಪುಟ –೧೫೭<br>**Volume - 157** | ಬೆಂಗಳೂರು, ಶನಿವಾರ, ೨೧, ಮೇ, ೨೦೨೨(ವೈಶಾಖ, ೩೧, ಶಕವರ್ಷ, ೧೯೪೪)<br>BENGALURU, SATURDAY, 21, MAY, 2022(VAISHAKHA, 31, SHAKAVARSHA, 1944) | ಸಂಚಿಕೆ ೯೭<br>**Issue 97** |

## ಭಾಗ ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

**ಕರ್ನಾಟಕ ಸರ್ಕಾರ**

ಸಂ.ಟಿಡಿ 126 ಟಿಡಿಒ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:19-05-2022.

**ಸುತ್ತೋಲೆ**

**ವಿಷಯ:** ವಾಹನಗಳ ನೋಂದಣಿ ಫಲಕಗಳ ಮೇಲೆ ನಿಯಮಬಾಹಿರವಾಗಿ. ಪ್ರದರ್ಶಿಸುತ್ತಿರುವ ಸಂಘ ಸಂಸ್ಥೆಯ ಹೆಸರು / ಚಿಹ್ನೆ / ಲಾಂಛನ ಇತ್ಯಾದಿ ಹೆಸರುಗಳನ್ನು ತೆರವುಗೊಳಿಸುವ ಬಗ್ಗೆ.

*****

ವಾಹನಗಳ ನೋಂದಣಿ ಸಂಖ್ಯಾ ಫಲಕಗಳನ್ನು ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 50ರಲ್ಲಿ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಅಳವಡಿಸಬೇಕಾಗಿರುತ್ತದೆ ಹಾಗೂ ಕರ್ನಾಟಕ ಮೋಟಾರು ವಾಹನ ನಿಯಮಗಳು 1989ರ ನಿಯಮ 145-ಎ ರಲ್ಲಿ (ಸದರಿ ಕಾನೂನು ಸರ್ಕಾರಿ ವಾಹನಗಳಿಗೆ ಅನ್ವಯಿಸುವುದಿಲ್ಲ) ಖಾಸಗಿ ವಾಹನಗಳು ಸರ್ಕಾರದ ಲಾಂಛನ ಮತ್ತು ಹೆಸರುಗಳನ್ನು ವಾಹನಗಳ ಮೇಲೆ ಪ್ರದರ್ಶಿಸುವುದನ್ನು ನಿರ್ಬಂಧಿಸುವ ಕುರಿತು ಉಲ್ಲೇಖಿಸಲಾಗಿರುತ್ತದೆ. ಕೇಂದ್ರದ The Emblems of India (Prohibition of Improper Use) Act 2005 (50 of 2005) ಇದರ ಕಲಂ 3 ರಲ್ಲಿ ಯಾವುದೇ ಖಾಸಗಿ ವಾಹನಗಳ ಮಾಲೀಕರುಗಳು ತಮ್ಮ ವಾಹನಗಳ ಮೇಲೆ ಸರ್ಕಾರಿ ಲಾಂಛನ ಅಥವಾ ಹೆಸರುಗಳನ್ನು ಅಳವಡಿಸಬೇಕಾದಲ್ಲಿ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದುಕೊಳ್ಳುವುದು ಅವಶ್ಯಕವಾಗಿರುತ್ತದೆ.

ಕರ್ನಾಟಕ ಮೋಟಾರು ವಾಹನ ನಿಯಮಗಳು 1989ರ ನಿಯಮ 145-ಎ ರಲ್ಲಿ ಕೆಳಕಂಡಂತೆ ಹೇಳಲಾಗಿದೆ :

145-A. Prohibition of improper use of State emblem- No person shall, except in such cases and under such conditions and without the previous permission of the Officer of the Government as may be authorized under Section 3 of the Emblems and Names (Prevention of Improper use) Act, 1950 (Central Act 12 of 1950) exhibit the State emblem on the name plate of any motor vehicle other than the motor vehicle belonging to the Government of Karnataka.

The Emblems of India (Prohibition of Improper Use) Act 2005 (50 of 2005) ಇದರ ಕಲಂ 3 ಕೆಳಕಂಡಂತಿದೆ:

3. **Prohibition of Improper use of certain emblems and names**:- Notwithstanding anything contained in any law for the time being in force, no person shall, except in such cases and under such conditions as may be prescribed by the Central Government, use or continue to use, for the purpose of any trade, business, calling or profession, or in the title of any patent, or in any trade mark or design, any name or emblem specified in the Schedule or any colourable imitation thereof without the previous permission of the Central Government as may be authorized in this behalf by the Government.

**ಈಗಾಗಲೇ ಸರ್ಕಾರದಿಂದ ಹೊರಡಿಸಿದ** ಸುತ್ತೋಲೆ ಸಂಖ್ಯೆ.HTD 346 SST 2019, ದಿನಾಂಕ:25-08-2021 ರಲ್ಲಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಸ್ವಂತ ವಾಹನದಲ್ಲಿ ಅನಧಿಕೃತ ಲಾಂಛನಗಳನ್ನು ಅಳವಡಿಸಿಕೊಂಡಿರುವ ವಿರುದ್ಧ ಕ್ರಮಕ್ಕಾಗಿ ಸೂಚಿಸಲಾಗಿರುತ್ತದೆ.

ಮುಂದುವರೆದು, ವಾಹನಗಳ ನೋಂದಣಿ ಫಲಕಗಳ ಮೇಲೆ ಅನಧಿಕೃತವಾಗಿ ರಾಷ್ಟ್ರೀಯ ಹಕ್ಕುಗಳ ಆಯೋಗ/ ರಾಜ್ಯ ಮಾನವ ಹಕ್ಕುಗಳ ಆಯೋಗಗಳ ಹೆಸರುಗಳನ್ನು ಹೋಲುವಂತಹ ರಾಷ್ಟ್ರೀಯ ರಾಜ್ಯ ಮಾನವ ಹಕ್ಕುಗಳ ಒಕ್ಕೂಟ/ ಸಂಸ್ಥೆ ಇತ್ಯಾದಿ ಹೆಸರುಗಳನ್ನು ಚಿಹ್ನೆ/ ಲಾಂಛನಗಳನ್ನು ಹಾಗೂ ಸಂಘ-ಸಂಸ್ಥೆಗಳ ಹೆಸರು ಅಳವಡಿಸಿಕೊಂಡಿರುವುದನ್ನು ತೆರವುಗೊಳಿಸಲು ಮಾನ್ಯ ಉಚ್ಛ ನ್ಯಾಯ ಸಿ.ಆರ್.ಎಲ್.ಪಿ.ನಂ.1850/2017ರಲ್ಲಿ ಸಲ್ಲಿಕೆಯಾಗಿರುವ ದಾವೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ದಿನಾಂಕ:07-01-2022ರಂದು ನೀಡಿದ ಆದೇಶದಡಿಯಲ್ಲಿ ಅನುಸರಿಸಬೇಕಾದ ಕ್ರಮಗಳ ವಿವರಗಳನ್ನು ಒದಗಿಸಲಾಗಿರುತ್ತದೆ. ಅದರಂತೆ ಸಂಬಂಧಿಸಿದ ಸಂಸ್ಥೆಯ ಅಧೀನದಲ್ಲಿ ಒಳಪಡುವ ಕಛೇರಿಗಳಲ್ಲಿ ಉಪಯೋಗಿಸುವ ವಾಹನಗಳಲ್ಲಿನ ಸರ್ಕಾರದ ಲಾಂಛನ ತೆರವುಗೊಳಿಸಿ ವಿವರಗಳನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಡಲು ಈಗಾಗಲೇ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು ರವರು ಹಲವಾರು ಪತ್ರಗಳಲ್ಲಿ ಕೋರಿರುತ್ತಾರೆ. ಆದರೆ, ಈ ಕುರಿತಂತೆ, ಇದುವರೆಗೆ ಕೆಲವೇ ಸಂಸ್ಥೆಗಳಿಂದ ಮಾಹಿತಿ ಸ್ವೀಕೃತವಾಗಿರುತ್ತದೆ.

ಸಾರಿಗೆ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: ಸಾಆ/ನೋಂದಣಿ-2/ಪಿ.ಆರ್-37/2019-20, ದಿನಾಂಕ: 9-2-2022ರ ಪತ್ರದಲ್ಲಿ ದಿನಾಂಕ:04-02-2022ರಂದು ಮುಂದುವರೆದ ವಿಚಾರಣೆಯಲ್ಲಿ ಮಾನ್ಯ ನ್ಯಾಯಾಲಯವು ನೀಡಿದ ಆದೇಶವನ್ನು ಉಲ್ಲೇಖಿಸುತ್ತಾ, ಸಂಬಂಧಿಸಿದ ಸಂಸ್ಥೆಯ ಅಧೀನದಲ್ಲಿ ಒಳಪಡುವ ಕಛೇರಿಗಳಲ್ಲಿ ಉಪಯೋಗಿಸುವ ವಾಹನ(ಖಾಸಗಿ ವಾಹನ ಸಮೇತ)ಗಳಲ್ಲಿ ಸರ್ಕಾರದ ಲಾಂಛನಗಳನ್ನು ಉಪಯೋಗಿಸದಂತೆ ಹಾಗೂ ವಾಹನಗಳ ಮೇಲೆ ನಿಗಮ, ಮಂಡಳಿ ಮತ್ತು ಸಂಸ್ಥೆಗಳ ಹೆಸರುಗಳನ್ನು ಬರೆದ ಯಾವುದೇ ತರಹದ ಫಲಕ ಅಥವಾ ಬರಹಗಳನ್ನು ಅಳವಡಿಸಬಾರದು ಎಂದು ಸ್ಪಷ್ಟ ಆದೇಶ ಮಾಡಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಸೂಕ್ತ ಕ್ರಮ ತೆಗೆದುಕೊಂಡು ತ್ವರಿತವಾಗಿ ಅನಧಿಕೃತ ಫಲಕಗಳನ್ನು

ತೆರವುಗೊಳಿಸಲು ಮತ್ತು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಮಾಹಿತಿ ರೂಪದಲ್ಲಿ ನೀಡಲು ಕೋರಲಾಗಿತ್ತು.

ಮುಂದುವರೆದು, ದಿ:18-3-2022ರಂದು ನಡೆದ ಸಭೆಯಲ್ಲಿ ನೀಡಿದ ನಿರ್ದೇಶನದಲ್ಲಿ, ಸದರಿ ವಿಷಯದ ಕುರಿತಂತೆ ಸುತ್ತೋಲೆ ಮೂಲಕ ಮಾನ್ಯ ನ್ಯಾಯಾಲಯದ ಆದೇಶದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ನಿರ್ದೇಶನ ನೀಡುವಂತೆ ಸೂಚಿಸಲಾಗಿದ್ದು, ಅದರಂತೆ, ಸಾರಿಗೆ ಆಯುಕ್ತರ ಕಛೇರಿಯ ದಿನಾಂಕ: 18-03-2022ರ ಸುತ್ತೋಲೆ ಯಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶಗಳ ಅನುಪಾಲನೆಗೆ ಕೋರಲಾಗಿತ್ತು. ಅಲ್ಲದೆ, ದಿ:21-3-2022ರ ಆದೇಶದ ಕುರಿತಂತೆಯೂ ಸಹ ಸೂಕ್ತ ಕ್ರಮಕ್ಕಾಗಿ ಸಾರಿಗೆ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: ಸಾಆ/ನೋಂದಣಿ-2/ಪಿ.ಆರ್-37/2019-20, ದಿನಾಂಕ:30-3-2022ರ ಪತ್ರದಲ್ಲಿ ಕೋರಲಾಗಿರುತ್ತದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:20-04-2022 ರಂದು ನಡೆದ ಮುಂದುವರೆದ ವಿಚಾರಣೆಯಲ್ಲಿ ನೀಡಿದ ಆದೇಶವನ್ನು ನಮೂದಿಸಿ ಅದರಂತೆ ಕ್ರಮ ಕೈಗೊಳ್ಳಲು ಸಾರಿಗೆ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: ಸಾಆ/ನೋಂದಣಿ-2/ಪಿ.ಆರ್-37/2019-20,ದಿನಾಂಕ:30-4-2022. ರಲ್ಲಿ ಕೋರಲಾಗಿರುತ್ತದೆ.

ಇದಕ್ಕೆ ಮುಂದುವರೆದು, ಸದರಿ ವಿಷಯದ ಕುರಿತು ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಅದರಂತೆ ಕ್ರಮ ವಹಿಸಲು ಆದೇಶಿಸಲಾಗಿದೆ.

1. ಎಲ್ಲಾ ಇಲಾಖೆಗಳ ಅಧೀನದಲ್ಲಿ ಬರುವ ಎಲ್ಲಾ ನಿಗಮ/ ಮಂಡಳಿ/ ಸಂಸ್ಥೆಗಳಿಗೆ ಪತ್ರ ಬರೆದು ಅವರ ನಿಗಮ, ಮಂಡಳಿ, ಸಂಸ್ಥೆಗಳ ವಾಹನಗಳ ಮೇಲೆ ಅನಧಿಕೃತವಾಗಿ ಅಳವಡಿಸಿರುವ ಎಲ್ಲಾ ಸರ್ಕಾರಿ ಲಾಂಛನ/ಚಿಹ್ನೆಗಳನ್ನು ತೆರವುಗೊಳಿಸುವುದು ಮತ್ತು ಪ್ರಗತಿಯನ್ನು ಪ್ರತಿ ಮಾಹೆ ವಾಹನಗಳ ನೋಂದಣಿ ಸಂಖ್ಯೆಗಳ ಸಮೇತ ಸರ್ಕಾರದ ಚಿಹ್ನೆ, ಲಾಂಛನ ಹಾಗೂ ಅನಧಿಕೃತ ನಾಮಫಲಕಗಳನ್ನು ತೆರವುಗೊಳಿಸಿದ ಮಾಹಿತಿಯನ್ನು ಸಾರಿಗೆ ಆಯುಕ್ತರಿಗೆ ನೀಡುವುದು. ಒಂದು ವೇಳೆ ನಿಗಮ, ಮಂಡಳಿ ಹಾಗೂ ಇತರೆ ಸಂಸ್ಥೆಗಳ ವಾಹನಗಳ ಮೇಲೆ ಅಳವಡಿಸಲಾಗಿರುವ ಸರ್ಕಾರಿ ಲಾಂಛನ/ ಚಿಹ್ನೆಗಳನ್ನು ತೆರವುಗೊಳಿಸಲು ವಿಫಲರಾದಲ್ಲಿ ಅಂತಹ ಮಂಡಳಿ, ನಿಗಮಗಳ ಹಾಗೂ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಯಾ ಕಛೇರಿಗಳ ಮುಖ್ಯಸ್ಥರನ್ನು ನೇರ ಜವಾಬ್ದಾರರನ್ನಾಗಿಸಿ ಮಾನ್ಯ ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ನಿಂದನಾ ಕ್ರಮ ಕೈಗೊಳ್ಳಲು ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡಲಾಗುವುದು.

   ಖಾಸಗಿ ಸಂಸ್ಥೆಗಳು ತಮ್ಮ ವಾಹನಗಳ ಮೇಲೆ ಅನಧಿಕೃತವಾಗಿ ಸರ್ಕಾರದ ಲಾಂಛನ ಚಿಹ್ನೆಗಳನ್ನು ಅಳವಡಿಸಿರುವುದು ಕಂಡುಬಂದಲ್ಲಿ (ನಾಮಫಲಕಗಳಲ್ಲಿ ಅಧ್ಯಕ್ಷರು /ಕಾರ್ಯದರ್ಶಿ ಇತ್ಯಾದಿ ಹೆಸರು) ಅಂತಹ ನೋಂದಣಿ ಫಲಕಗಳನ್ನು ತೆರವುಗೊಳಿಸಲು ಮಾನ್ಯ ನ್ಯಾಯಾಲಯದ ಆದೇಶದಂತೆ ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆಗಳು ಜಂಟಿಯಾಗಿ ಪ್ರವರ್ತನ ಚಟುವಟಿಕೆಗಳನ್ನು ಕೈಗೊಂಡು ಕ್ರಮ ವಹಿಸುವುದು.

2. ಪೊಲೀಸ್ ಇಲಾಖೆಯು ಬಳಸುತ್ತಿರುವ ಪೊಲೀಸ್-ಐ-ಆಪ್ ತಾಂತ್ರಿಕತೆಯನ್ನು ಉಪಯೋಗಿಸಿ ವಾಹನಗಳಿಗೆ ಅಳವಡಿಸಿರುವ ಚಿಹ್ನೆ ಹಾಗೂ ಲಾಂಛನಗಳನ್ನು ಮತ್ತು ಅನಧಿಕೃತ ನಾಮಫಲಕಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.
3. ಸರ್ಕಾರಿ ವಾಹನಗಳ ಮೇಲೆ ಅಳವಡಿಸಿರುವ ನೋಂದಣಿ ಫಲಕಗಳನ್ನು ಹೊರತುಪಡಿಸಿ ಇನ್ನಿತರೆ ಫಲಕಗಳನ್ನು ತೆರವುಗೊಳಿಸುವ ಕುರಿತು ನಿರಂತರವಾಗಿ ದಿನಪತ್ರಿಕೆ ಮತ್ತು ಟಿ.ವಿ. ಮಾಧ್ಯಮಗಳಲ್ಲಿ ಪ್ರಚಾರವನ್ನು ಸಂಬಂಧಿಸಿದ ಇಲಾಖೆಗಳು ನೀಡುವುದು. ಅದೇ ರೀತಿಯಾಗಿ ಮಿಂಚಂಚೆ ಮತ್ತು ಜಾಲತಾಣಗಳನ್ನು ಉಪಯೋಗಿಸಿಕೊಂಡು ಈ ಕುರಿತು ಸಾರ್ವಜನಿಕರಿಗೆ ನಿರಂತರವಾಗಿ ಮಾಹಿತಿ ನೀಡುವುದು.

4. ಅನಧಿಕೃತ ನೋಂದಣಿ ಫಲಕಗಳನ್ನು ತೆರವುಗೊಳಿಸುವ ಬಗ್ಗೆ ವೆಬ್ ಸೈಟ್ ನಿಂದ ವ್ಯಾಪಕ ಪ್ರಚಾರ ನೀಡುವುದು.
5. ಸರ್ಕಾರೇತರ ವಾಹನಗಳ ಸರ್ಕಾರದ ಲಾಂಛನ ಮತ್ತು ನಾಮಫಲಕಗಳನ್ನು ಅಳವಡಿಸಿಕೊಂಡಿರುವ ವಾಹನಗಳ ವಿರುದ್ಧ ಮೋಟಾರು ವಾಹನಗಳ ಕಾಯ್ದೆಯಡಿಯಲ್ಲಿ ದಂಡ ವಿಧಿಸುವುದು ಮತ್ತು ಮಾನ್ಯ ನ್ಯಾಯಾಲಯದ ಆದೇಶದಂತೆ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 207 ರಂತೆ ಸಾರಿಗೆ ಇಲಾಖೆಯು ಕ್ರಮ ಜರುಗಿಸುವುದು.
6. ಸಾರಿಗೆ ಇಲಾಖೆಯು, ಇಲಾಖೆಯ ವ್ಯಾಟ್ಸಪ್ ಸಂಖ್ಯೆ, ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಒದಗಿಸಿ, ಸಾರ್ವಜನಿಕರು ರಸ್ತೆಯ ಮೇಲೆ ಅನಧಿಕೃತವಾಗಿ ಸರ್ಕಾರೇತರ ವಾಹನಗಳ ಮೇಲೆ ಸರ್ಕಾರಿ ಲಾಂಛನ ಮತ್ತು ನಾಮಫಲಕಗಳನ್ನು ಅಳವಡಿಸಿರುವುದು ಕಂಡುಬಂದಲ್ಲಿ ಅದನ್ನು ಇಲಾಖೆಯ ವ್ಯಾಟ್ಸಪ್ ಸಂಖ್ಯೆಗೆ ಫೋಟೋ ಸಮೇತ ಮಾಹಿತಿ ಕಳುಹಿಸುವಂತೆ ತಿಳಿಸಿ ಇಂತಹ ಮಾಹಿತಿ ಸ್ವೀಕರಿಸಿದ ತಕ್ಷಣ ವಾಹನ ಮಾಲೀಕರ ವಿಳಾಸಕ್ಕೆ ನೋಟೀಸ್ ಜಾರಿಗೊಳಿಸಿ ಸರ್ಕಾರದ ಲಾಂಛನ ತೆರವುಗೊಳಿಸಿ ದಂಡ ವಿಧಿಸುವುದು.
7. ಸಾರಿಗೆ ಮತ್ತು ಪೊಲೀಸ್ ಇಲಾಖೆಗಳ ಪ್ರವರ್ತನ ಸಿಬ್ಬಂದಿಯವರು ತನಿಖಾ ಸಮಯದಲ್ಲಿ ವಾಹನಗಳಲ್ಲಿ ಅನಧಿಕೃತ ಲಾಂಛನ/ಚಿಹ್ನೆಗಳನ್ನು ಸ್ಥಳದಲ್ಲಿಯೇ ತೆರವುಗೊಳಿಸುವ ಕ್ರಮ ವಹಿಸುವುದು.
8. ವಾಹನಗಳಿಗೆ ಸರ್ಕಾರಿ ಲಾಂಛನ, ಚಿಹ್ನೆ ಮತ್ತು ನಾಮಫಲಕಗಳನ್ನು ತಯಾರಿಸಿಕೊಡುವಂತಹ ಖಾಸಗಿ ನಾಮಫಲಕ ತಯಾರಕರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರುಗಿಸುವ ಬಗ್ಗೆ ಪೊಲೀಸ್ ಇಲಾಖೆ ಕ್ರಮ ವಹಿಸುವುದು.
9. ಮಧ್ಯಪ್ರದೇಶದ ಇಂದೋರ್ ನಗರದಲ್ಲಿ ಪೊಲೀಸ್ ಇಲಾಖೆಯ ಸಿ.ಆರ್.ಪಿ.ಸಿ. ಕಾಯ್ದೆಯ ಕಲಂ 144(2) ರಂತೆ ಆದೇಶ ಹೊರಡಿಸಿ ವಾಹನಗಳಿಗೆ ಫ್ಯಾನ್ಸಿ ನಂಬರ್ ಫಲಕ ತಯಾರಿಕೆ ಮತ್ತು ಅಳವಡಿಕೆಯನ್ನು ನಿಷೇಧಿಸಿದ್ದು, ಅದೇ ರೀತಿಯಾಗಿ ರಾಜ್ಯದಲ್ಲಿಯೂ ಸಹ ಎಲ್ಲಾ ನಗರಗಳ ಪೊಲೀಸ್ ಆಯುಕ್ತರುಗಳು ಸದರಿ ಕಾಯ್ದೆಯಡಿ ಆದೇಶ ಹೊರಡಿಸಲು ಕ್ರಮ ಕೈಗೊಳ್ಳುವುದು ಹಾಗೂ ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು.

. ಸಾರಿಗೆ ಮತ್ತು ಪೊಲೀಸ್ ಇಲಾಖೆಗಳು ಈ ಸಂಬಂಧ ಸೂಕ್ತ ಮಾರ್ಗಸೂಚನೆಗಳನ್ನು ಹೊರಡಿಸಿ ಸಾರ್ವಜನಿಕರಿಗೆ ಮಾಹಿತಿ ನೀಡುವುದು.

ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದ ನಿಗಮ ಮಂಡಳಿ / ಸಂಸ್ಥೆ ಮತ್ತು ಇಲಾಖೆಗಳು ಗೌ, ಉಚ್ಚ ನ್ಯಾಯಾಲಯದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮ ಕೈಗೊಂಡು, ತಮ್ಮ ಸಂಸ್ಥೆ ಇಲಾಖೆ ಇತ್ಯಾದಿಗಳ ಅಧೀನಕ್ಕೆ ಒಳಪಡುವ ಕಛೇರಿಗಳಲ್ಲಿ ಉಪಯೋಗಿಸುವ ವಾಹನ (ಖಾಸಗಿ ವಾಹನ ಸಮೇತ) ಗಳಲ್ಲಿ ಸರ್ಕಾರದ ಲಾಂಛನ/ಚಿಹ್ನೆಗಳನ್ನು ಉಪಯೋಗಿಸದಂತೆ ಹಾಗೂ ವಾಹನಗಳ ನಾಮಫಲಕಗಳ ಮೇಲೆ ನಿಗಮ ಮಂಡಳಿ ಮತ್ತು ಸಂಸ್ಥೆಗಳ ಹೆಸರುಗಳನ್ನು ಬರೆದ ಎಲ್ಲಾ ತರಹದ ಅನಧಿಕೃತ ಫಲಕಗಳನ್ನು ಕಟ್ಟುನಿಟ್ಟಾಗಿ ತೆರವುಗೊಳಿಸಲಾಗಿದೆ ಎಂದು ಸರ್ಕಾರಕ್ಕೆ ಮತ್ತು ಸಾರಿಗೆ ಇಲಾಖೆಗೆ ಮಾಹಿತಿಯನ್ನು ದಿನಾಂಕ:24-05-2022 ರೊಳಗಾಗಿ ನೀಡುವಂತೆಯೂ ಸಹ ಈ ಮೂಲಕ ಸೂಚಿಸಲಾಗಿದೆ. ತಪ್ಪಿದಲ್ಲಿ, ಅಂತಹವರ ವಿರುದ್ಧ ನ್ಯಾಯಾಲಯ ನಿಂದನಾ ಪ್ರಕರಣವನ್ನು ದಾಖಲಿಸಿಕೊಳ್ಳಲು ಗೌ. ಉಚ್ಚ ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡುವುದಲ್ಲದೆ, ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲೂ ಸಹ ಶಿಫಾರಸ್ಸು ಮಾಡಲಾಗುವುದೆಂದು ಈ ಮೂಲಕ ಎಚ್ಚರಿಕೆಯನ್ನು ನೀಡಲಾಗಿದೆ.

**(ಪಿ. ರವಿಕುಮಾರ್)**
**ಮುಖ್ಯ ಕಾರ್ಯದರ್ಶಿ,**
**ಕರ್ನಾಟಕ ಸರ್ಕಾರ**

**PR-176**